ಆವರ ಮನೆಯವರನ್ನು ಆವರಿಸಿಕೊಂಡಿದೆ.

ಒಂದು ದುರ್ದಿನ. ಸಾತೆಮ್ಮನ ಮನೆಯ ಹಿರೀಸೊಸೆ ತಮ್ಮ ಅತ್ತೆಮ್ಮ ಕಟ್ಟಿಸಿದ್ದ ಶಾಲೆಗೆ ಬಂದು ಮಧ್ಯಾಹ್ನದ ಅಡುಗೆ ಮಾಡುವ ಕೆಲಸಕ್ಕೆ ಸೇರಿಕೊಂಡಳು. ಈ ವಿಷಯ ತಿಳಿಯುತ್ತಿದ್ದ ಹಾಗೆ, ಇಡೀ ಊರಿನ ಜನರೆಲ್ಲ ಬೆಚ್ಚಿಬಿದ್ದರು. ಓಡೋಡಿ ಬಂದು ಆ ಶಾಲೆಯ ಮುಖ್ಯೋಪಾಧ್ಯಾಯರಿಗೆ ಹೇಳಿ ದೊಡ್ಡಮನೆಯ ಸೊಸೆಯನ್ನು ವಾಪಸ್ಸು ಕಳುಹಿಸಿದರು. ನಮ್ಮ ಇಡೀ ಊರನ್ನು ಸಲಹಿದ್ದ ಸಾತೆಮ್ಮನ ಮನೆಯ ಸೊಸೆ ಹೀಗೆ ಚಾಕರಿಗೆ ಬಂದದ್ದನ್ನು ನೋಡಿ ಎಲ್ಲರ ಕಣ್ಣುಗಳಲ್ಲಿ ನೀರು ಇಳಿಯುತ್ತಿತ್ತು. ಸೊಸೆ ಮರಳಿ ಹೋಗುವಾಗ ಕಡುಕಷ್ಟದ ದಿನಗಳಲ್ಲೂ ಅವಳ ನೋವಿನ ಮುಖದಲ್ಲಿ ಘನತೆಯಿತ್ತು. ನೋವುಣ್ಣದವರು ಯಾರೂ ಇಲ್ಲ ಎನ್ನುವಂತೆ ಕಣ್ಣೀರನ್ನು ಸುರಿಸದೆಯೇ ಆ ಹೆಣ್ಣು ತಲೆಮೇಲೆ ಸೆರಗು ಹೊದ್ದು ಮನೆಗೆ ಹಿಂದಿರುಗಿತು. ನಂತರ ಊರಿನವರೆಲ್ಲ ಸೇರಿ ಅವರ ಮನೆಗೆ ಬೇಕಿರುವಷ್ಟು ದವಸ- ಧಾನ್ಯ, ಕಾಳುಕಡ್ಡಿಗಳನ್ನು ಒದಗಿಸಿದರು. ರಸ್ತೆಗೆ ಸಮೀಪವಿದ್ದ ಅವರ ಜಮೀನಿನ ಬಟಾಬಯಲಲ್ಲಿ ಸಾತೆಮ್ಮನ ಸಮಾಧಿ ತೆರೆದ ಆಕಾಶದ ಕೆಳಗೆ ಒಂಟಿಯಾಗಿ ಮಲಗಿದೆ. ಸಮಾಧಿಯ ಮೇಲಿನ ಮಣ್ಣು ಶ್ರಾವಣದಂತೆ ಯಾವಾಗಲೂ ನಗುತ್ತಿರುತ್ತದೆ. ಈಗಲೂ ನಮ್ಮ ಊರಿನವರು ಆ ಹಾದಿಯಲ್ಲಿ ಬರುವಾಗ, ಹೋಗುವಾಗ ಸಾತೆಮ್ಮನ ಸಮಾಧಿಗೆ ನಮಿಸದೆ ಹೋಗುವುದಿಲ್ಲ! ಈ ಕುಟುಂಬದ ದಾರುಣ ಅವಸಾನವನ್ನು ಮರೆಯುವುದಕ್ಕಿಂತ ಮತ್ತೆ ಮತ್ತೆ ನೆನಪಿಸಿಕೊಳ್ಳುವುದಕ್ಕೆ ನೂರಾರು ಕಾರಣಗಳಿವೆ ಎನಿಸಿತು. ಅದಕ್ಕೆಂದೇ ಇದನ್ನೆಲ್ಲಾ ಹೇಳಿದೆ.

ಗುಡಿಹಳ್ಳಿಗೆ ಹಿಂದಿನ ದಿನಗಳಿಗೆ ಮರಳುವ ಎಲ್ಲ ಬಾಗಿಲುಗಳೂ ಈಗ ಶಾಶ್ವತವಾಗಿ ಮುಚ್ಚಿವೆ. ಕೇರಿಯ ಮನಸ್ಸುಗಳು ಈಗ ಎಲ್ಲವನ್ನೂ ಮೊದಲಿನಿಂದ ಆರಂಭಿಸಿವೆ. ಪ್ರತಿ ಶನಿವಾರ ಪೀರ್ಲ ಗುಡಿಯ ಮುಂದೆ ಕುಳಿತು ಭಜನೆ ಪದ ಹಾಡುತ್ತಿದ್ದ ಮುತ್ಯಾಲಪ್ಪ, ಸಿವುಡಯ್ಯ, ನಾಗಣ್ಣ ಮತ್ತು ಕಾಡಯ್ಯನವರು ಭೂಮಿಯ ಮೇಲಿನ ತಮ್ಮ ಬದುಕನ್ನು ಮುಗಿಸಿಹೋಗಿದ್ದಾರೆ. ಆ ಸ್ಥಾನದಲ್ಲಿ ಆ ತಂಡದ ಕಿರಿಯರು ಆ ಭಜನೆ ಪದಗಳನ್ನು ಮುಂದುವರಿಸಿದ್ದಾರೆ. ಬೆಳುದಿಂಗಳು ನಿಧಾನವಾಗಿ ಅವರ ಮುಖಗಳಲ್ಲಿ ಕಾಂತಿ ತರುತ್ತಿದೆ. ಸಾತೆಮ್ಮನ ಜಮೀನಿನಲ್ಲಿದ್ದ ಹುಣಸೆ ಮರಗಳು, ಮಾವಿನಮರಗಳು, ನೆಲ್ಲಿ, ಪಾರಿಜಾತದ ಮರ, ಬಿದಿರುಮೆಳೆ, ಅಳಿದುಳಿದ ತೆಂಗಿನ ಮರಗಳು ತಮ್ಮ ಹಳೆಯ ಗುರುತುಗಳನ್ನು ಕೊಡವಿ ವಸಂತವನ್ನು ಎದುರುಗೊಳ್ಳುತ್ತಿವೆ. ●

